ಇ) ನಿಯಮಾನುಸಾರ ಕೆರೆ ಗುತ್ತಿಗೆ ಮೂಲಕ ವಿಲೇಗೊಳಿಸಿರುವುದರಿಂದ ಸರ್ಕಾರಕ್ಕೆ ನಷ್ಟವಾಗಿರುವುದಿಲ್ಲ.

ಈ) ಕರ್ನಾಟಕ ಒಳನಾಡು ಕಾರ್ಯನೀತಿ–2014 ರ ಅನುಬಂಧ–4 ಕ್ರಮ ಸಂಖ್ಯೆ 6 ರಂತೆ ಗುತ್ತಿಗೆ ಮೊತ್ತವನ್ನು ಎಪ್ರಿಲ್ 30 ರೊಳಗೆ ಪಾವತಿಸದಿದ್ದಲ್ಲಿ, ಅನುಬಂಧ–11 ರಲ್ಲಿನ ಇಲಾಖಾ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ್ದಲ್ಲಿ, ಗುತ್ತಿಗೆ ಆದೇಶವನ್ನು ರದ್ದುಪಡಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ.

ಶಟಲ್‌ಕಾಕ್ ಆಟದ ಅಂಕಣ ನಿರ್ಮಿಸುವುದು

992(983); ಶ್ರೀ ಕೃಷ್ಣಪ್ಪ ಎಂ.ಟಿ.

ಅ) ತುರುವೇಕೆರೆ ಪಟ್ಟಣದಲ್ಲಿ ಕ್ರೀಡಾ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಆಗುವಂತಹ ಶೆಟಲ್‌ಕಾಕ್ ಆಟದ ಅಂಕಣವನ್ನು ನಿರ್ಮಿಸಲು ಅನೇಕಬಾರಿ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ) ಬಂದಿದೆ.

ಆ) ಪ್ರಸ್ತುತ ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡಲಾಗಿದ್ದು, ಅನುದಾನದ ಕೊರತೆ ಇರುವುದರಿಂದ ಈ ಕಾಮಗಾರಿ ಕೈಗೆತ್ತಿಕೊಂಡಿರುವುದಿಲ್ಲ.